# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ರಾಜ್ಯಾದ್ಯಂತ ಹೊಸದಾಗಿ ಸಂಪರ್ಕ ಪಡೆಯುವ ಗ್ರಾಮೀಣ ಪ್ರದೇಶಗಳ ವಿದ್ಯುತ್ ಸ್ಥಾವರಗಳಿಗೆ 4 star ಮತ್ತು ನಗರ ಪ್ರದೇಶಗಳ ವಿದ್ಯುತ್ ಸ್ಥಾವರಗಳಿಗೆ 5 star rated ಪರಿವರ್ತಕಗಳನ್ನು ಅಳವಡಿಸುವ ಬಗ್ಗೆ.

ಓದಲಾಗಿದೆ :- ಮಾನ್ಯ ಇಂಧನ ಸಚಿವರ ಟಿಪ್ಪಣಿ ಸಂಖ್ಯೆ ಇಂಸ/ಕ/188/2016-17 ದಿನಾಂಕ 3-6-2017

ಪ್ರಸ್ತಾವನೆ :-

1. ರಾಜ್ಯದಲ್ಲಿ, ಪ್ರಸ್ತುತ ಸುಮಾರು 6.95 ಲಕ್ಷ ವಿದ್ಯುತ್ ವಿತರಣಾ ಪರಿವರ್ತಕಗಳಿದ್ದು, ಈ ಪೈಕಿ ನಗರ ಪ್ರದೇಶಗಳಲ್ಲಿ ಸುಮಾರು 1.26 ಲಕ್ಷ ಹಾಗೂ ಗ್ರಾಮಾಂತರ ಪ್ರದೇಶಗಳಲ್ಲಿ ಸುಮಾರು 5.69 ಲಕ್ಷ ವಿತರಣಾ ಪರಿವರ್ತಕಗಳನ್ನು ಅಳವಡಿಸಲಾಗಿದೆ. ಪ್ರತಿ ವರ್ಷ ಸರಾಸರಿ ಸುಮಾರು 55000 ವಿತರಣಾ ಪರಿವರ್ತಕಗಳು ವಿದ್ಯುತ್ ವಿತರಣಾ ಜಾಲಕ್ಕೆ ಸೇರ್ಪಡೆಗೊಳ್ಳುತ್ತಿವೆ.
2. ರಾಜ್ಯದಲ್ಲಿ ಇಂಧನ ಉಳಿತಾಯ ಮಾಡುವ ಪ್ರಮುಖ ಉದ್ದೇಶದಿಂದ ಮತ್ತು ವಿದ್ಯುತ್ ಸರಬರಾಜು ಕಂಪನಿಗಳಲ್ಲಿ ಅಳವಡಿಸಲಾಗುವ ವಿತರಣಾ ಪರಿವರ್ತಕಗಳ ಗುಣಮಟ್ಟವನ್ನು ಕಾಯ್ದುಕೊಳ್ಳುವ ದೃಷ್ಟಿಯಿಂದ ಹೆಚ್ಚಿನ ಕಾರ್ಯಕ್ಷಮತೆಯುಳ್ಳ ವಿತರಣಾ ಪರಿವರ್ತಕಗಳನ್ನು ಅಳವಡಿಸುವ ಅವಶ್ಯಕತೆಯಿರುತ್ತದೆ. ಈ ನಿಟ್ಟಿನಲ್ಲಿ, ಪ್ರಸ್ತುತ ಅಳವಡಿಸಲಾಗುತ್ತಿರುವ 3 star rated ಪರಿವರ್ತಕಗಳ ಬದಲಿಗೆ, 4 star ಮತ್ತು 5 star rated ಪರಿವರ್ತಕಗಳನ್ನು ಅಳವಡಿಸಿದಲ್ಲಿ, ಪರಿವರ್ತಕಗಳಲ್ಲಿ ಉಂಟಾಗುವ ಆಂತರಿಕ ನಷ್ಟವು ಕಡಿಮೆಗೊಂಡು ಪರಿವರ್ತಕಗಳ ಒಟ್ಟಾರೆ ಕಾರ್ಯಕ್ಷಮತೆಯು ಉತ್ತಮಗೊಳ್ಳಲಿದೆ. ಹೆಚ್ಚಿನ ಕಾರ್ಯಕ್ಷಮತೆಯುಳ್ಳ star rated ಪರಿವರ್ತಕಗಳಿಂದ ವಿದ್ಯುತ್ ವಿತರಣಾ ನಷ್ಟವು ಕಡಿಮೆಯಾಗುವುದಲ್ಲದೆ ವಿದ್ಯುತ್ ಬೇಡಿಕೆ ನಿರ್ವಹಣೆಯನ್ನು ಸುಧಾರಿಸಲು ಅನುಕೂಲವಾಗಲಿದೆ.
3. ಈ ಸಂಬಂಧ, ಕೇಂದ್ರ ಇಂಧನ ಮಂತ್ರಾಲಯವೂ ಸಹ ಅಧಿಸೂಚನೆ ಹೊರಡಿಸಿದ್ದು, 4 or 5 star rated ಪರಿವರ್ತಕಗಳ ಅಳವಡಿಸುವಿಕೆಯಿಂದ ಉಳಿತಾಯವಾಗಬಹುದಾದ ವಿದ್ಯುತ್ ನಷ್ಟವನ್ನು ತಿಳಿಸಿರುತ್ತಾರೆ.
4. ನೂತನವಾಗಿ ಸಂಪರ್ಕ ಪಡೆಯುವ ಎಲ್ಲಾ ರೀತಿಯ ಸ್ಥಾವರಗಳಿಗೆ ಕಡ್ಡಾಯವಾಗಿ ಹೆಚ್ಚಿನ ಕಾರ್ಯಕ್ಷಮತೆಯುಳ್ಳ 4 or 5 star rated ಪರಿವರ್ತಕಗಳನ್ನೇ ಅಳವಡಿಸಿದಲ್ಲಿ, ವಿದ್ಯುತ್ ಉಳಿತಾಯವಾಗುವುದರ ಜೊತೆಗೆ ವಿದ್ಯುತ್ ಜಾಲದ ಮೇಲೆ ಕ್ರಮೇಣವಾಗಿ ಹೊರೆ ಕಡಿಮೆಯಾಗಲಿದೆ.

ಈ ಹಿನ್ನೆಲೆಯಲ್ಲಿ ಕೆಳಕಂಡ ಆದೇಶ ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ ಇಎನ್ 119 ವಿಎಸ್‌ಸಿ 2017, ಬೆಂಗಳೂರು, ದಿನಾಂಕ: 07-06-2017**

ದಿನಾಂಕ 01-07-2017 ರಿಂದ ಜಾರಿಗೆ ಬರುವಂತೆ ರಾಜ್ಯಾದ್ಯಂತ ನೂತನವಾಗಿ ಸಂಪರ್ಕ ಪಡೆಯವ ಸರ್ಕಾರಿ, ಖಾಸಗಿ, ವಾಣಿಜ್ಯ, ಸ್ವಂತ ಹಾಗೂ ಇತರೆ ಬಳಕೆಯ ಎಲ್ಲಾ ವಿದ್ಯುತ್ ಸ್ಥಾವರಗಳಿಗೆ ಗ್ರಾಮೀಣ ಪ್ರದೇಶದಲ್ಲಿ 4 star ಮತ್ತು ನಗರ ಪ್ರದೇಶಗಳ ವ್ಯಾಪ್ತಿಯಲ್ಲಿ 5 star rated ಪರಿವರ್ತಕಗಳನ್ನು ಕಡ್ಡಾಯವಾಗಿ ಅಳವಡಿಸಬೇಕೆಂದು ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ವಿ.ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ
ಇಂಧನ ಇಲಾಖೆ

**ಇವರಿಗೆ** :- ಸಂಕಲನಕಾರರು, ಸರ್ಕಾರಿ ಮುದ್ರಣಾಲಯ, ಕರ್ನಾಟಕ ರಾಜ್ಯಪತ್ರ ಪ್ರಕಟಣೆಗಾಗಿ.

**ಪ್ರತಿ:-**

1. ವ್ಯವಸ್ಥಾಪಕ ನಿರ್ದೇಶಕರು, ಕವಿಪ್ರನಿನಿ, ಕಾವೇರಿ ಭವನ, ಬೆಂಗಳೂರು.
2. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ, ಬೆಂಗಳೂರು.
3. ವ್ಯವಸ್ಥಾಪಕ ನಿರ್ದೇಶಕರು, ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ, ಮೈಸೂರು.
4. ವ್ಯವಸ್ಥಾಪಕ ನಿರ್ದೇಶಕರು, ಮಂಗಳೂರು ವಿದ್ಯುತ್ ಸರಬರಾಜು ಕಂಪನಿ, ಮಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಹುಬ್ಬಳ್ಳಿ ವಿದ್ಯುತ್ ಸರಬರಾಜು ಕಂಪನಿ, ಹುಬ್ಬಳ್ಳಿ.
6. ವ್ಯವಸ್ಥಾಪಕ ನಿರ್ದೇಶಕರು, ಗುಲ್ಬರ್ಗಾ ವಿದ್ಯುತ್ ಸರಬರಾಜು ಕಂಪನಿ, ಕಲಬುರ್ಗಿ.
7. ವ್ಯವಸ್ಥಾಪಕ ನಿರ್ದೇಶಕರು, ಹುಕ್ಕೇರಿ ಗ್ರಾ.ವಿ.ಅ.ಸ.ಸಂ.
8. ಕಾರ್ಯದರ್ಶಿಗಳು, ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣ ಆಯೋಗ, ಎಂ.ಜಿ. ರಸ್ತೆ ಬೆಂಗಳೂರು.
9. ನಿರ್ದೇಶಕರು (ತಾಂತ್ರಿಕ), ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು
10. ಮಾನ್ಯ ಇಂಧನ ಸಚಿವರ ವಿಶೇಷಾಧಿಕಾರಿಗಳು, ವಿಧಾನ ಸೌಧ, ಬೆಂಗಳೂರು
11. ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
12. ನಿರ್ದೇಶಕರು (ಆರ್ಥಿಕ) /ಜಂಟಿ ನಿರ್ದೇಶಕರು (ಯೋಜನೆ/ಇ.ಎಂ.ಸಿ-2 &3), ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
13. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಹಿರಿಯ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
14. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ, ವಿಕಾಸ ಸೌಧ, ಬೆಂಗಳೂರು.
15. ಶಾಖಾ ರಕ್ಷಾ ಕಡತ/ಕಛೇರಿ ಪ್ರತಿ/ಹೆಚ್ಚುವರಿ ಪ್ರತಿಗಳು.